ಪ್ರೊಜೆಸ್ಟಿರಾನ್ ಬಿಡುಗಡೆಗೊಳಿಸುತ್ತದೆ. ಈ ರಸದೂತಗಳು ಹೆಣ್ಣಿನ ಲೈಂಗಿಕ ಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಬಹುಶಃ ನಿಮ್ಮ ದೇಹದಲ್ಲಿ ಇತರರಿಗಿಂತ ಹೆಚ್ಚು ರಸದೂತ ಸ್ರವಿಸುತ್ತಿರುವ ಜನನಾಂಗಕ್ಕೆ ಹೆಚ್ಚಿನ ರಕ್ತ ಪೂರೈಕೆಯಾಗಿ ಹೆಚ್ಚೆಚ್ಚು ಲೈಂಗಿಕ ಹಪಾಹಪಿ ಕಾಣಿಸಿಕೊಳ್ಳುತ್ತಿರಬೇಕು.

ಇಲ್ಲಿ ಹೆಣ್ಣು ತನ್ನನ್ನು ಅರಿತು ನಡೆದರೆ ಹಾರ್ಮೋನಿನ ಆಟ ನಡೆಯೋದಿಲ್ಲ ಅನ್ನೋದನ್ನು ನೆನಪಿಟ್ಟುಕೊಳ್ಳಿ.

ಹಾಗೆಯೇ ಹೆಣ್ಣಿನ ಭಾವತೃಪ್ತಿಯಲ್ಲಿ ಏಕಾಂತತೆ, ಪಾರಸ್ಪರಿಕತೆ ಹಾಗೂ ಮನೋ ದೈಹಿಕ ಅಂಶಗಳು ಪ್ರಮುಖವಾಗಿ ಪ್ರಭಾವ ಬೀರುತ್ತವೆ. ಸುರತದಲ್ಲಿ ಸ್ಪರ್ಶದ ಗುಣವಿಶೇಷಗಳೂ ಸಂವೇದನೆಗಳೂ ಜನನಾಂಗದಿಂದ ಮಿದುಳಿಗೆ ತಲುಪಿ ಭಾವತೃಪ್ತಿಯಾಗುತ್ತದೆ.

ನೀವು ಮದುವೆಗೂ ಮೊದಲು ಗರ್ಭಿಣಿಯಾದಾಗ ಜನನಾಂಗದ ಒಳತುಟಿಗಳು ದಪ್ಪವಾಗಿ, ಹೆರಿಗೆಯ ನಂತರ ಅದು ಹಾಗೆಯೇ ಉಳಿದುಕೊಂಡಿದೆ. ಅದರ ಪರಿಣಾಮವಾಗಿ ಸುಖದ ತುರೀಯ ಸ್ಥಿತಿಗೆ ಕಾರಣವಾಗುವ ಭಗಾಂಕುರವು ಅದರಲ್ಲಿ ಹುದುಗಿಕೊಂಡಿದ್ದು ಅದು ಹೆರಿಗೆಯ ಮೊದಲಿನಂತೆ ಘರ್ಷಣೆಗೆ ನಿಲುಕಲಿಕ್ಕಿಲ್ಲ. ನಿಮ್ಮ ಮದುವೆಗೂ ಮುಂಚಿನ ಸಂಬಂಧವನ್ನು ಗಂಡು ಭಗಾಂಕುರದ ಮೇಲೆ ಹಾಕುತ್ತದ್ದ ಒಂದು ನಿರ್ದಿಷ್ಟ ಒತ್ತಡ, ರಭಸ ಮತ್ತು ಘರ್ಷಿಸುವ ಕೋನಗಳು ಆ ಸುರತದ ಉತ್ಕಟತೆಯನ್ನು ಪರಾಕಾಷ್ಠೆಗೆ ಒಯ್ದಿತ್ತು. ಆ ಪುರುಷಾಕಾರದೊಂದಿಗಿನ ಸುರತದಲ್ಲಿ ಒಂದು ನಿರ್ದಿಷ್ಟ ಕ್ರಮದಿಂದ ಹೊರಟು ಭಾವಪ್ರಾಪ್ತಿಯನ್ನು ಅನುಭವಿಸಲು ಕಲಿತಿದ್ದೀರಿ. ಆಗ ಹಾಗೆ ರೂಢಿಸಿಕೊಂಡ ಗೊತ್ತಾದ ಸ್ಪರ್ಶ ಸುಖಕ್ಕೆ ನಿಮ್ಮ ಮೈ ಮನ ಒಗ್ಗಿ ಹೋಗಿದೆ. ಇದೀಗ ಗಂಡನಿಂದ ಎಷ್ಟೇ ತುರುಸಿನಿಂದ ಸರಿಯಾದ ಕ್ರಮದಲ್ಲಿ ಸುರತಕ್ರಿಯೆ ನಡೆದರೂ ಅದು ನಿಮ್ಮ ಮನದಲ್ಲಿ ಹಿಂದಿನ ನಿರೀಕ್ಷಿತ ಮಟ್ಟದಲ್ಲಿ ಪ್ರಭಾವ ಬೀರದೇ ಸುರತದ ಕೊನೆಯಲ್ಲಿ ಆಗುವ ಭಾವತೃಪ್ತಿ ಸಿಗುತ್ತಿಲ್ಲ ಅಷ್ಟೇ.



ಇನ್ನು ಗಂಡನ ಲೈಂಗಿಕ ಹುಚ್ಚಾಟಗಳಿಗೆ ಆತನೊಂದಿಗೆ ಸಮಾಲೋಚನೆ ನಡೆಸದೆ ಇಂಥದ್ದೇ ಕಾರಣ ಎಂದು ಹೇಳಲಾಗುವುದಿಲ್ಲ. ಆದರೆ 'ಹೆಣ್ಣಿಗೆ ಹಠ ಇರಬಾರದು. ಗಂಡಿಗೆ ಚಟ ಇರಬಾರದು' ಎಂಬ ಮಾತಿದೆ. ಬಹಳ ಮಾಡಿ ನಿಮ್ಮ ಪತಿಯು ತನ್ನಲ್ಲಿ ಹತ್ತಿಕ್ಕಿಕೊಂಡ ಲೈಂಗಿಕ ವರ್ತನೆಗಳು ಅತಿಯಾಗಿ ಹೆಡೆಯೆತ್ತಿ ಆ ಚಟವೇ ವಿಕೃತವಾಗಿ ಮಾರ್ಪಾಡಬೇಕು ಎನ್ನುತ್ತಾ–

'ಯಾವುದಕ್ಕೂ ಇಬ್ಬರೂ ಜೊತೆಯಾಗಿ ಒಮ್ಮೆ ಬಂದು ಭೇಟಿಯಾಗಿ' ಎಂದರು.

ಸಾಣೆ ಹಿಡಿಸಿಕೊಂಡ ರಾತ್ರಿ ಗಂಡನೊಟ್ಟಿಗೆ ರತಿಕ್ರೀಡೆಯಲ್ಲಿ ಇದು ಮೊದಲ ರಾತ್ರಿ ಎಂಬಂತೆ ಭಾವೋದ್ವೇಗದಲ್ಲಿ ಬಹಳ ಹೊತ್ತು ತೊಡಗಿಕೊಂಡಿದ್ದೆ. ಹೊಸ ಪಟ್ಟುಗಳಿಂದ ಎಲ್ಲೆಲ್ಲಿ ಮೀಟಿದರೆ ಮುಲುಕಾಡಿಯೇನು ಎಂಬ ಹೆಣಗಾಟದಲ್ಲೇ ಕಾಲಹರಣವಾಯಿತು. ಅದೊಂದು ಕುರುಡು ಹಿಡಿದ ಬಡಿಗೆ. ದಾಂಪತ್ಯದ ಕಾವಿನಲ್ಲಿ ನನ್ನ ಕಾಮನೆಗಳು ಹಿಂದೆಯೂ ಕರಗಲಿಲ್ಲ. ಇಂದಿನದೂ ಜಮಡುವಂಥದ್ದಲ್ಲ. ಆಗ ರಸಿಕರು ಯಾರಾದರೂ ಆ ಕ್ಷಣದಲ್ಲಿ ಅತಿಕ್ರಮಿಸಿ ನನ್ನ ಇಂಚಿಂಚಲ್ಲೂ ಉಡುಗಿ ಹೋಗಬಾರದೆ ಅನಿಸಿತ್ತು. ಅದೇ ಸನ್ನಿಯಲ್ಲಿ ಮರುದಿನ ಕಾಮೋತ್ತೇಜಕ ಮಾತ್ರೆಯನ್ನು ಪತಿಗೆ ಗೊತ್ತಾಗದಂತೆ ಕೊಟ್ಟು ಲೈಂಗಿಕ ಛೇದನೆಗೂ ಇಳಿದೆ. ಯಾವುದೂ ನೆಲೆ ಕಾಣಿಸಲಿಲ್ಲ. ಆ ಹತಾಶೆಯು ಮನದಾಳಕ್ಕಿಳಿದು ನನ್ನಲ್ಲಿನ ಆರೋಗ್ಯಕರ ಭಾವಗಳು ಕ್ರಮೇಣ ನಿಷ್ಕ್ರಿಯಗೊಳ್ಳುತ್ತ ಹೋದವು. ಕಾಮಸನ್ನೆಯು ಮೈ ಮನಗಳ ಮೇಲೆ ಹತೋಟಿ ಸಾಧಿಸಿ ಪಕ್ಕಾ ಪೋಲಿಯಾಗಿ ಮಾರ್ಪಟ್ಟಿತು.

ನನ್ನನ್ನು ಒಳದನಿ ಇಲ್ಲದೆ ಸೊಕ್ಕಿನ ಹೆಣ್ಣು ಅಂದರೂ ಅಡ್ಡಿಯಿಲ್ಲ. ಎಲ್ಲರೊಳಗೂ ಗುಪ್ತಗಾಮಿನಿಯಾಗಿ ಮಿಸುಕಾಡುವುದನ್ನೇ ಬಿಡುಬೀಸಾಗಿ ಬಿಚ್ಚಿಡುತ್ತೇನೆ. ಗಂಡನಿರುವುದು ಬರಿ ಮಗ್ಗಲು ಬಿಸಿ ಮಾಡಲಿಲ್ಲ. ನನಗೆ ಅತಿರತಿಯಲ್ಲಿ ಹಿಂಸಿಸುವ ಹಾಸಿಗೆಯಲ್ಲಿ ದಣಿಸಿ ನೋಯಿಸುವ ಗಂಡು ಬೇಕು. ತಾಕತ್ತುಳ್ಳ ನನ್ನ ಮೈಕಟ್ಟಿನ ಆಳತೆಗೋಲಿಗೆ ತಕ್ಕಂತಹ ಸುಖದ ಕೀಲನ್ನು ಅರಸುವ ಕದನ ಕುತೂಹಲವೆಂದರೆ ಅದೇನು ಜಾತಕ ಹಿಡಿದು ಹೊಂದಾಣಿಕೆ ಮಾಡಿಕೊಳ್ಳುವುದೇ? ಹಾಗೆಂದು ಬೀದಿ ಅಲೆದರೆ ಸಿಗುವುದೂ ಅಲ್ಲ. ಪಾಶ್ಚಾತ್ಯರ ಜೀವನ ಶೈಲಿಯಂತೆ ಮೈಥುನ ಬಯಸಿ, ಅನುಭವಿಸಿಯೇ ಗಂಡಿನ ಯೋಗ್ಯತೆ ಅರಿಯಬೇಕಾದ ಈ ಬದುಕಿನ ಸಹಜ ಸುಖಗಳಿಗೆ ನಾನೇಕೆ ಎರವಾಗಲಿ? ಪಾಂಚಾಲಿಯನ್ನು ಎದುರಿಗಿಟ್ಟಿಕೊಂಡೇ ಹೆಚ್ಚಿನ ರಸಾನುಭವವಾಗಿ ಹಗಲನ್ನು ನುಂಗಿ ಬಾಳುವ ಕತ್ತಲನ್ನು ನನ್ನ ತಾಲೀಮು ರಂಗವಾಗಿಸಿಕೊಂಡೆನು. ಇದರ ನಡುವೆ ಗಂಡನಿಗಿಲ್ಲದ ಕಟ್ಟುಪಾಡುಗಳು ಹೆಣ್ಣಿಗೇಕೆ ಅನ್ನಿಸಿದರೂ ಸಮಾಜದ ಹಂಗಿಗಾಗಿ ಸಜ್ಜನಿಕೆಯ ಮುಖವಾಡ ತೊಟ್ಟೆನು.

ಗಂಡನಲ್ಲಿಲ್ಲದ್ದನ್ನು ನನ್ನದಾಗಿಸಿಕೊಳ್ಳುವ ಹಪಾಹಪಿಯಲ್ಲಿ ಪರಪುರುಷನಲ್ಲಿ ಅಂತರ್ಗತವಾದ ಗಂಡು ಛಾಯೆಯನ್ನು ಗುರುತಿಸಿ ವಿವಶಳಾಗುತ್ತಿದ್ದೆನು. ಅವಕಾಶವಾದರೆ 'ನಾ ನಿನ್ನ ಪ್ರತಿ ಸವಾಲಿಗೂ ಉತ್ತಮವಾಗಬಲ್ಲೆ' ಎಂಬ ಗುಪ್ತ ಸಂದೇಶ ರವಾನೆಯಾಗುತ್ತಿತ್ತು.

ಅಲ್ಲಿಂದ ಹೊತ್ತಿಲ್ಲದ ಹೊತ್ತಿನಲ್ಲಿ ಹಸಿಕಾಚಾಗಳು ಗಾಳಿಯಲ್ಲಿ ಹಾರಾಡ ತೊಡಗಿದವು.

ತೆಕ್ಕೆಗೆ ಸಿಕ್ಕವರಲ್ಲಿ ಜಯರಾಜನಿಗೆ ಅಗ್ರಪಟ್ಟವಿದ್ದರೆ, ನಂತರ ಬಂದ ದಿವಾಕರ, ದಿನೇಶ ಸರೀಕರಾಗಿ ಉಳಿದಿದ್ದಾರೆ. ಸತೀಶ ಎಂಬವ ತೀರಿಕೊಂಡಿದ್ದರೆ, ನನ್ನ ತಂದೆಯ ವಯಸ್ಸಿನ ಭಗವಂತ, ಪ್ರಕಾಶ ಹಾಗೆ ಬಂದು ಹೀಗೆ ಹೋದರು. ಆಗೀಗ ಹಳು ಸವರಿಕೊಂಡು ಆ ಸಜ್ಜನನೆಂದರೆ ಮಲ್ಲಿಯನ್ನು ನಡುರಾತ್ರಿಯಲ್ಲಿ ಸೇರುತ್ತ, ಅಷ್ಟೋ ಇಷ್ಟೋ ಚಂದ್ರನಾಡಿ ಅರಳಿಸಿಕೊಳ್ಳುತ್ತಿರುವೆ. ಆದರೂ ಪರ ಪುರುಷನೊಂದಿಗೆ ಸೇರಿ ಬೇರ್ಪಟ್ಟ ಮರುಕ್ಷಣ ನನ್ನ ಗಂಡ ನನಗೆ ಬೇಕು ಅನ್ನಿಸುವುದೇ ವಿಚಿತ್ರ.

ಮೊದಮೊದಲು ಮಗುವಿನ ಹಂಬಲದಲ್ಲಿ ದೇಹವು ಬದಲಾವಣೆಯನ್ನು ಬಯಸಿ ಸೋತಿತು. ಕ್ರಮೇಣ ಸಂಬಂಧಗಳನ್ನು ಪಲ್ಲಟಿಸುತ್ತ ಗಮ್ಮತ್ತಿಗಾಗಿ ವೈವಿಧ್ಯದ ಸೆಳೆತಕ್ಕೆ ಇನ್ನಷ್ಟು ಮತ್ತಷ್ಟು ಪಕ್ಕಾಗುತ್ತಲೇ ಹೋದೆ. ದೇಹ ಯಾರೊಂದಿಗೆ ಕ್ರೀಡಿಸುತ್ತಿದ್ದರೂ ಮನವು ಜಯರಾಜನೊಂದಿಗೆ ಭಾವಸಮಾಧಿಯಲ್ಲಿರುತ್ತಿತ್ತು. ಒಪ್ಪಿದ ಪ್ರತಿಯೊಬ್ಬನಲ್ಲೂ ಜಯರಾಜನನ್ನು ಅರಸಿ ಪರಿತಪಿಸುತ್ತಿದ್ದೆ. ಪೌರುಷ ಉಕ್ಕಿ ಹರಿದಂತೆ ಕಾಣುವ ಜಯರಾಜನ ದೇಹ ಭಾಷೆಯೇ ಒಂದು ತೂಕವಾದರೆ ಬೇರೆಯವರಲ್ಲಿ ಒಂದೊಂದು ತರದ ರಸಾಸ್ವಾದಿಯಾದದ್ದು. ಆ ಐಲೇ ಒಂದ್ರೀತಿ ಮಚ್ಚಾಗಿ ಹೋಯಿತು.

ನನ್ನ ವೈರುಧ್ಯಗಳ ನಡುವೆ ಪತಿಯ ಮನಸ್ಥಿತಿಯ ಬಗೆಗೆ ಯೋಚಿಸಲಾಗಿರಲಿಲ್ಲ. ಸಮಯಾವಕಾಶ ನೋಡಿಕೊಂಡು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದು ಗೊತ್ತಾಗಿಯೂ ಗೊತ್ತಿಲ್ಲದಂತೆ ಇದ್ದು, ಹತಾಶೆಯಲ್ಲಿ ಅಂಜಿಕೆ ಸರಿದುಬಿಟ್ಟಿದ್ದರು. ಕಾಮೋನ್ಮಾದದಲ್ಲಿ ತೇಲಾಡುವವರನ್ನು ತಿದ್ದಲಾಗದು ಎಂಬ ಕೊರಗಿನಲ್ಲೇ ಖಿನ್ನತೆಯಿಂದ ನಶಿಸಿದ್ದರು. ಒಮ್ಮಿಂದೊಮ್ಮೆಲೆ ಅವರ ದೇಹದಲ್ಲಿನ ಸಕ್ಕರೆ ಮಟ್ಟವು ಕುಸಿದು ಅಸು ನೀಗಿದಾಗ ನಾನು ಕಣ್ಣೀರಿಡಲಿಲ್ಲ. ಮತ್ತಿದಕ್ಕಾಗಿ ನನ್ನಲ್ಲಿ ವಿಷಾದವಿದೆಯೇ ಹೊರತು ಎಳ್ಳಷ್ಟೂ ಪಶ್ಚಾತ್ತಪವಿಲ್ಲ.

ಗಂಡನ ಸಾವು ನನ್ನ ಲೈಂಗಿಕ ಸ್ವೇಚ್ಛೆಗೆ ಕುಲುಮೆಯ ರೂಪದಲ್ಲಿ ಒದಗಿ ಬಂತು.

ತಿದಿ ಒತ್ತುತ್ತ ಒತ್ತುತ್ತ ನಾನು ನಾನಾಗಿರಲೇ ಇಲ್ಲ. ಗರ್ಭಾಶಯದ ಕೊರಳಿನ ಸೋರಿಗಾಗಿ ಗರ್ಭಾಶಯದ ಕ್ಯಾನ್ಸರಿಗೆ ತಿರುಗಿದ್ದು ಗೊತ್ತಾಗುವಾಗ ಉಲ್ಬಣಿಸಿಬಿಟ್ಟಿತ್ತು.

ಈಗೀಗ ಮೈ ಬಿಗು ಕಳೆದುಕೊಂಡು ಒಣ ಕೊರಡಿನಂತಾಗಿದೆ. ಹುಲುಬಯಕೆಗೆ ಓಗೊಟ್ಟ ನನಗೆ ನಡುವಯಸ್ಸಿನ ಈ ಯಮಯಾತನೆ ಬೇಕಿರಲಿಲ್ಲ.

ಆಸ್ಪತ್ರೆಯಲ್ಲಂತೂ ಮಲ್ಲಿ ಬಂಧುವಿನಂತೆ ನೋಡಿಕೊಳ್ಳುತ್ತಿದ್ದಾನೆ.... ಆದರದ ಗಂಡನಿಲ್ಲದ ನನ್ನನ್ನು ಹೇಗೆ ನಗದೀಕರಿಸಿಕೊಳ್ಳಬೇಕು ಅಂತ ಹೊಂಚು ಹಾಕುತ್ತಿದ್ದುದನ್ನು ಅರಿಯಲು ಹೆಚ್ಚು ಕಾಲ ಕಾಯಿಸಲೂ ಇಲ್ಲ ....

ಇಳಿಹೊತ್ತಿಗೆ ದಿಕ್ಕೇಡಿಯಾಗಿ ಮಲಗಿದ್ದೆ. ಕಿಟಕಿಯಾಚೆ ದೈತ್ಯ ಜೆಸಿಬಿಯೊಂದು ಆಸ್ಪತ್ರೆಯ ವಿಸ್ತರಣೆಗೆ ಮಣ್ಣು ಅಗೆದಗೆದು ಗುಡ್ಡೆ ಹಾಕುತ್ತಿದ್ದುದನ್ನು ಕಂಡೆನು.

■